ಎಸ್ ಸಿ ಃ ಪಿ ಡಬ್ಲ್ಯೂ ಃ 1 - ನಂದಿನಿ

ದಿನಾಂಕಃ 14.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ವಾದಿ ಪರ ಃ ಶ್ರೀ ಎಸ್ ಕೆ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ಧು, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ ಪ್ರತಿವಾದಿ ನನ್ನಿಂದ ಹಣ ಪಡೆದು ಬರೆದು ನೀಡಿದ ಪ್ರನೋಟ್ ಹಾಜರು ಪಡಿಸಿದ್ದು ಅದನ್ನು ನಿಪಿಃ 1 ಎಂದು ಗುರುತಿಸಲಾಗಿದೆ ಹಾಗೂ ಹಣ ಸಂದ ರಶೀದಿಯನ್ನು ನಿಪಿಃ 2 ಎಂದು ಗುರುತಿಸಲಾಗಿದೆ. ನಿಪಿಃ 1 ಮತ್ತು 2 ರಲ್ಲಿ ಪ್ರತಿವಾದಿ ಸಹಿ ಮತ್ತು ಹೆಬ್ಬೆಟ್ಟು ಸಹಿ ಮಾಡಿರುತ್ತಾರೆ. ಸದರಿ ಸಹಿಯನ್ನು ನಿಪಿಃ1(ಎ) ಮತ್ತು 2(ಎ) ಎಂದು ಗುರುತಿಸಲಾಗಿದೆ. ನಿಪಿಃ 2 ರಲ್ಲಿ ಸಾಕ್ಷಿಗಳಾಗಿ ಶ್ರೀರಾಮ ಮತ್ತು ರಾಮಕೃಷ್ಣ ಸಹಿ ಮಾಡಿರುತ್ತಾರೆ. ಸದರಿ ಸಹಿಗಳನ್ನು ನಿಪಿಃ 2(ಬಿ) ಮತ್ತು (ಸಿ) ಎಂದು ಗುರುತಿಸಲಾಗಿದೆ. ಸದರಿ ದಾಖಲಾತಿಯನ್ನು ಲಕ್ಷ್ಮೀ ನಾರಾಯಣ ಬರೆದಿದ್ದು, ಸಾಕ್ಷಿ ಅವರ ಸಹಿಯನ್ನು ಗುರುತಿಸಿದ್ದು ಅವರ ಸಹಿಯನ್ನು ನಿಪಿ ಃ 1(ಬಿ) ಮತ್ತು 2(ಡಿ) ಎಂದು ಗುರುತಿಸಲಾಗಿದೆ. ಪ್ರತಿವಾದಿಗೆ ನೀಡಿದ ಲೀಗಲ್ ನೋಟೀಸ್ ನ ಕಛೇರಿ ಪ್ರತಿಯನ್ನು ನಿಪಿಃ 3 ಎಂದು, ಸದರಿ ನೋಟೀಸನ್ನು ಪ್ರತಿವಾದಿ ಪಡೆದ ಸ್ವೀಕೃತಿ ಪತ್ರವನ್ನು ನಿಪಿಃ 4 ಎಂದು ಗುರುತಿಸಲಾಗಿದೆ.

**ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು ಕಾಲಾವಕಾಶ ನೀಡಿ ಪಾಟೀ ಸವಾಲಿಗಾಗಿ ಮುಂದೂಡಲಾಗಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ